ಧಾರೆಗಳನ್ನು ಒಳಗೊಂಡ ಸಂಘಟನೆಯಾಗಿತ್ತು. ಕಾಂಗ್ರೆಸ್ ಪಕ್ಷದಲ್ಲಿ ಕಮ್ಯುನಿಸ್ಟರಾದ ಜೆ.ಪಿ., ನರೇಂದ್ರದೇವ ಮೊದಲಾದವರ ಜೊತೆಗೆ ಮೀನೂ ಮಸಾನಿ, ಸಂಪೂರ್ಣಾನಂದ, ಯೂಸುಫ್ ಮೆಹರಾಲಿ, ಮಂಗಳೂರಿನಲ್ಲಿ ಹುಟ್ಟಿದ ಕಮಲಾದೇವಿ ಚಟ್ಟೋಪಾಧ್ಯಾಯ ಮೊದಲಾದವರಿದ್ದರು. ಇವರಲ್ಲಿ ತೀವ್ರಗಾಮಿ ಕಮ್ಯುನಿಸ್ಟರಾದ ಎಂ.ಎನ್. ರಾಯ್ ಅನುಯಾಯಿಗಳೂ ಇದ್ದರು. ಕಮ್ಯುನಿಸ್ಟ್ ವಿಚಾರಧಾರೆಯನ್ನು ಒಪ್ಪಿದ್ದ ನೆಹರುಗೆ ಇವರಲ್ಲಿ ಬಹುತೇಕರು ಪ್ರಿಯರಾಗಿದ್ದರು. ಆದರೆ ರಾಯ್‌ವಾದಿಗಳು ಅಥವಾ ಕಮ್ಯುನಿಸ್ಟರು, ಈ ಎರಡು ಬಣಕ್ಕೂ ಸೇರದಿದ್ದ ಲೋಹಿಯಾ ಬಗ್ಗೆ ಆರಂಭದಲ್ಲಿ ನೆಹರುಗೆ ವಿಶೇಷ ಆಕರ್ಷಣೆಯಿರಲಿಲ್ಲ.

ಒಟ್ಟಾರೆಯಾಗಿ ಈ ತರುಣ ಕಮ್ಯುನಿಸ್ಟ್ ತಂಡಕ್ಕೆ ಕಾಂಗ್ರೆಸ್ ಪಕ್ಷ ಚಳುವಳಿ ರಾಜಕಾರಣವನ್ನು ಇನ್ನಷ್ಟು ತೀವ್ರಗೊಳಿಸಬೇಕೆಂದು ಅನ್ನಿಸುತ್ತಿತ್ತು. ಸ್ವಾತಂತ್ರ್ಯ ಚಳುವಳಿಯ ಫಲವಾಗಿ ಹುಟ್ಟಿರುವ ರಾಷ್ಟ್ರೀಯವಾದವು ಸಮಾಜವಾದಿ ಮಾರ್ಗ ಸ್ಥಾಪನೆಯ ಅಗತ್ಯ ಹಂತ ಎಂದು ಈ ತಂಡ ನಂಬಿತ್ತು; ಕಾಂಗ್ರೆಸ್ಸಿನೊಳಗೇ ಕೆಲಸ ಮಾಡುತ್ತಾ ಕಾಂಗ್ರೆಸ್ಸಿಗೆ ಸಮಾಜವಾದಿ ದಿಕ್ಕು ಕೊಡಬೇಕು ಎಂದು ಹೊರಟಿತ್ತು. ಕಾರ್ಮಿಕರು ಹಾಗೂ ರೈತರನ್ನು ಸಂಘಟಿಸಿ, ಅವರ ಕೂಲಿಯ ಹೋರಾಟ ಹಾಗೂ ಆರ್ಥಿಕ ಬೇಡಿಕೆಗಳನ್ನು ರಾಷ್ಟ್ರೀಯ ಚಳುವಳಿಯ ಸಾಮಾಜಿಕ ತಳಹದಿಯಾಗಿಸಬೇಕು ಎಂದು ನಂಬಿದ್ದ ಈ ತಂಡ ಆ ದಿಕ್ಕಿನಲ್ಲಿ ಕೆಲಸ ಶುರು ಮಾಡಿತು.

ಇದರ ಫಲವಾಗಿ 'ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿ' ಹುಟ್ಟಿತು. ಪಕ್ಷಕ್ಕೆ ಅಧ್ಯಕ್ಷರಿರಲಿಲ್ಲ. ಜಯಪ್ರಕಾಶ ನಾರಾಯಣ ಪಕ್ಷದ ಮಹಾ ಕಾರ್ಯದರ್ಶಿಯಾದರು. ಪಕ್ಷದ ಕಾರ್ಯಕಾರಿಣಿ ಸಭೆಯ ಸದಸ್ಯರಾದ ಲೋಹಿಯಾ ಹೆಗಲಿಗೆ ಪಕ್ಷದ ತಾತ್ವಿಕ ಮುಖವಾಣಿ 'ಕಾಂಗ್ರೆಸ್ ಸೋಷಲಿಸ್ಟ್' ಪತ್ರಿಕೆಯ ಸಂಪಾದಕತ್ವ ಬಿತ್ತು. ಲೋಹಿಯಾರ ಕಲ್ಕತ್ತಾ ರಾಜಕೀಯ ಚಟುವಟಿಕೆಗಳ ಜೊತೆಗೆ 'ಕಾಂಗ್ರೆಸ್ ಸೋಷಲಿಸ್ಟ್' ಪತ್ರಿಕೆಯ ಕೆಲಸವೂ ಸೇರಿಕೊಂಡಿತು.

ಸ್ವಾತಂತ್ರ್ಯ ಚಳುವಳಿ ಹಾಗೂ ಅದರ ಸುತ್ತಣ ರಾಜಕೀಯ ಚಟುವಟಿಕೆಗಳಿಗೆ ಖಚಿತ ತಾತ್ವಿಕ ಆಯಾಮ ಕೊಡುವ ಉತ್ಸಾಹದಲ್ಲಿದ್ದ ಲೋಹಿಯಾ 'ಕಾಂಗ್ರೆಸ್ ಸೋಷಲಿಸ್ಟ್' ಪತ್ರಿಕೆಯ ಕೆಲಸವನ್ನು ಗಂಭೀರವಾಗಿ ಶುರು ಮಾಡಿದರು. 29 ಸೆಪ್ಟೆಂಬರ್ 1934. ಅವತ್ತು ಪ್ರಕಟವಾದ 'ಕಾಂಗ್ರೆಸ್ ಸೋಷಲಿಸ್ಟ್' ಪತ್ರಿಕೆಯ ಮೊದಲ ಸಂಚಿಕೆಯ ಸಂಪಾದಕೀಯದಲ್ಲಿ ಅಲ್ಲಿಯವರೆಗಿನ ಸ್ವಾತಂತ್ರ್ಯ ಚಳುವಳಿಯ ಸಾಧನೆಗಳನ್ನು, ಸಮಸ್ಯೆಗಳನ್ನು ಲೋಹಿಯಾ ವಿಶ್ಲೇಷಿಸಿದರು:

'ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ನಮ್ಮ ದೇಶದ ಜನತೆಯಲ್ಲಿ ಅಪಾರ ಶಕ್ತಿಯಿದೆ; ಆದರೆ ಯಾವುದಕ್ಕಾಗಿ ಹೋರಾಡುತ್ತಿದ್ದೇವೆ? ನಮ್ಮ ಶತ್ರುಗಳು ಯಾರು? ಮಿತ್ರರು ಯಾರು? ಈ ಎಲ್ಲದರ ಪ್ರಜ್ಞೆ ಜನತೆಗೆ ಇದ್ದಂತಿಲ್ಲ. ಸಾಮಾನ್ಯ ಜನರು ತಮ್ಮ ಮತೀಯ ಹಾಗೂ ಜಾತೀಯ ಗುಂಪುಗಾರಿಕೆಗಳನ್ನು ಬಿಟ್ಟು ಅವರ ವರ್ಗ ಹಿತಾಸಕ್ತಿಗೆ ಅಗತ್ಯವಾದ ವರ್ಗಗಳ ಒಗ್ಗಟ್ಟನ್ನು ಬೆಳೆಸಲು ಸೋಷಲಿಸ್ಟ್ ಪಕ್ಷ ಪ್ರಯತ್ನಿಸುತ್ತದೆ. ಆಗ ಜನತೆಯ ಇಚ್ಛಾಶಕ್ತಿಯನ್ನು ಒಗ್ಗೂಡಿಸುವ ಹೊಸ ಯುಗ ಶುರುವಾಗುತ್ತದೆ.'

ಲೋಹಿಯಾರ ಪ್ರಥಮ ಸಂಪಾದಕೀಯದಲ್ಲಿ ಅವರು ಜರ್ಮನಿಯಲ್ಲಿ ಕಲಿತ ಮಾರ್ಕ್ಸಿಸ್ಟ್ ಪರಿಭಾಷೆ ಸ್ಪಷ್ಟವಾಗಿ ಕಾಣುತ್ತಿತ್ತು.

1934 ಅಕ್ಟೋಬರ್ 21, 22ರಂದು ಮುಂಬಯಿಯಲ್ಲಿ ನಡೆದ ಸಮ್ಮೇಳನದಲ್ಲಿ 'ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿ' ಪೂರ್ಣ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ಬಂತು.

'ಕಾಂಗ್ರೆಸ್ ಸೋಷಲಿಸ್ಟ್' ಪತ್ರಿಕೆಯ ಸಂಪಾದಕರ ವಾಸ ಕಲ್ಕತ್ತಾದ ಟ್ರೇಡ್ ಯೂನಿಯನ್ ಸೆಂಟರಿನಲ್ಲಿ. ಅಥವಾ ಗೆಳೆಯರ ಮನೆಗಳಲ್ಲಿ. ಊಟ ಸಿಕ್ಕಿದರೆ ಸಿಕ್ಕಿತು. ಇಲ್ಲದಿದ್ದರೆ ಇಲ್ಲ. ಅರೆಹೊಟ್ಟೆಯ ಸಂಪಾದಕ ಟ್ರೇಡ್ ಯೂನಿಯನ್ ಸೆಂಟರಿನಲ್ಲಿ ರಾತ್ರಿ ಓದು ಬರಹ ಮುಗಿದ ಮೇಲೆ ಎರಡು ಟೇಬಲ್ ಜೋಡಿಸಿ ಅದರ ಮೇಲೆ ನಿದ್ದೆ ಮಾಡುತ್ತಿದ್ದರು. ಗೆಳೆಯರು ಸಿಕ್ಕಾಗ ಚಹಾ. ಚಹಾದ ಅಂಗಡಿಯವನೊಬ್ಬ ಲೋಹಿಯಾ ಮತ್ತವರ ಗೆಳೆಯರಿಗೆ ಚಹಾ ಉದ್ರಿ ಕೊಟ್ಟು ಕೊಟ್ಟು ಕೊನೆಗೆ ಅವನೂ ಸಮಾಜವಾದಿ ಗುಂಪಿನ ಸದಸ್ಯನಾದ!

ಊಟ, ಸೂರು ಯಾವುದೂ ನಿಶ್ಚಿತವಿಲ್ಲದೆ ಓದು, ಬರಹ, ಚಿಂತನೆ, ದೇಶ ನಿರ್ಮಾಣದ ರಾಜಕಾರಣದ ಬಗೆಗೆ ಹೆಚ್ಚು ಯೋಚಿಸುತ್ತಿದ್ದ ಲೋಹಿಯಾರ ಈ ಸ್ಥಿತಿ ಅವರ ಬದುಕಿನ ಕೊನೆಯ ನಾಲ್ಕು ವರ್ಷಗಳ ತನಕವೂ ಹೆಚ್ಚುಕಡಿಮೆ ಹೀಗೇ ಇತ್ತು. ಸರಳ ಜೀವನ ನಡೆಸುತ್ತಿದ್ದ ಲೋಹಿಯಾ ಹಣದ ಬಗ್ಗೆ ತಲೆ ಕೆಡಿಸಿಕೊಂಡವರೇ ಅಲ್ಲ. ಒಬ್ಬಂಟಿಯಾಗಿದ್ದ ಲೋಹಿಯಾಗೆ ಹಣಕಾಸಿನ ಹಂಗಿರದ ರಾಜಕೀಯ ಕಾರ್ಯಕರ್ತನ ಜೀವನ ನಡೆಸುವುದು ಕಷ್ಟ ಎನ್ನಿಸಲಿಲ್ಲ.

ಲೋಹಿಯಾರ ಕಷ್ಟ ನೋಡಿದ ಸಿರಿವಂತ ಗೆಳೆಯನೊಬ್ಬ ಯಾವುದಾದರೂ ನೌಕರಿ ಹಿಡಿಯಲು ಸಲಹೆ ಕೊಟ್ಟು ಇನ್ನೂರು ರೂಪಾಯಿ ಕೊಟ್ಟ. ಲೋಹಿಯಾ ಬಟ್ಟೆ ಅಂಗಡಿಗೆ ಹೋಗಿ ಟೋಪಿ, ಜುಬ್ಬಾ, ಪಂಚೆ ಕೊಂಡರು. ಬೇಕು ಬೇಕಾದ ಪುಸ್ತಕಗಳನ್ನು ಕೊಂಡರು. ಎಪ್ಪತ್ತು ರೂಪಾಯಿ ಖರ್ಚಾಯಿತು. ಅದೇ ಗೆಳೆಯನ ಜೊತೆ ಹೋಗಿ ಹೊಟ್ಟೆ ತುಂಬಾ ಉಂಡರು. ದಾರಿಯಲ್ಲಿ ಸಿಕ್ಕ ಭಿಕ್ಷುಕರಿಗೆ ಚಿಲ್ಲರೆ ಕಾಸು ಕೊಟ್ಟರು. ಮನೆ ತಲುಪಿದಾಗ ಮೂವತ್ತು ರೂಪಾಯಿ ಉಳಿದಿತ್ತು. ಮಾರನೆಯ ಬೆಳಗ್ಗೆ ಕಷ್ಟದಲ್ಲಿದ್ದ ಕ್ರಾಂತಿಕಾರಿಯೊಬ್ಬನ ಹೆಂಡತಿ ಅವರ ಮನೆಗೆ ಬಂದಳು. ಉಳಿದ ಹಣವನ್ನೆಲ್ಲ ಆಕೆಗೆ ಕೊಡುವಂತೆ ಗೆಳೆಯನಿಗೆ ಹೇಳಿದರು. ಅಲ್ಲಿಗೆ ನೌಕರಿಯ ಕತೆಯೂ ಮುಗಿಯಿತು; ಹಣದ ಕತೆಯೂ ಮುಗಿಯಿತು!

ಹಣದ ಬಗ್ಗೆ ಈ ಬಗೆಯ ಧೋರಣೆಯಿದ್ದ ಲೋಹಿಯಾ ಜೀವನದುದ್ದಕ್ಕೂ ಹಣ ಸಂಪಾದಿಸಲೇ ಇಲ್ಲ! ಆದರೆ ಅವರು ಸಂಪಾದಿಸುತ್ತಿದ್ದ 'ಕಾಂಗ್ರೆಸ್ ಸೋಷಲಿಸ್ಟ್' ಪತ್ರಿಕೆಯ ಸಂಚಿಕೆಗಳು ಸ್ವಾತಂತ್ರ್ಯ ಚಳುವಳಿಯ ಬಗ್ಗೆ, ಗಂಭೀರ ವಿಶ್ಲೇಷಣೆಗಳ ಬಗ್ಗೆ ಆಸಕ್ತಿಯಿದ್ದ ಎಲ್ಲರ ಗಮನ ಸೆಳೆಯಲಾರಂಭಿಸಿದವು. ಗದ್ಯ ಬರವಣಿಗೆಗೆ ಬೇಕಾದ ಸ್ಪಷ್ಟತೆ, ಖಚಿತತೆ, ನೈತಿಕತೆ, ಪಾರದರ್ಶಕತೆ ಎಲ್ಲವೂ ಲೋಹಿಯಾ ಬಳಸುತ್ತಿದ್ದ ಇಂಗ್ಲಿಷ್ ಭಾಷೆಯಲ್ಲಿದ್ದವು. ಗಾಂಧೀಜಿ ಕೂಡ ಈ ಪತ್ರಿಕೆಗೆ ಲೇಖನ ಬರೆಯಲು ಒಪ್ಪಿದ್ದರು. ಅಷ್ಟರಲ್ಲಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ 'ಕಾಂಗ್ರೆಸ್ ಸೋಷಲಿಸ್ಟ್' ಪತ್ರಿಕೆಯಲ್ಲಿ ಲೋಹಿಯಾ ಬರೆದ ವಿಮರ್ಶೆ ಗಾಂಧೀಜಿಯನ್ನು ರೇಗಿಸಿತು!

ಗಾಂಧೀಜಿಗೆ ಸಿಟ್ಟು ಬಂದ ಆ ಸಂದರ್ಭವನ್ನು ಲೋಹಿಯಾ ಮುಂದೊಮ್ಮೆ ನೆನೆದರು: '1932–33ರ ಸ್ವಾತಂತ್ರ್ಯ ಚಳುವಳಿಯ ವಿಫಲತೆಯಿಂದ ಹುಟ್ಟಿದ ಮಂಕನ್ನು ನಿವಾರಿಸಲು ಗಾಂಧೀಜಿ 'ಅಖಿಲ ಭಾರತೀಯ ಗ್ರಾಮೋದ್ಯೋಗ ಸಂಘ' ಇತ್ಯಾದಿಗಳನ್ನು ಶುರು ಮಾಡಿದ್ದರು; ಅವುಗಳ ಬಗೆಗೆ ನಾನೊಂದು ಲೇಖನ ಬರೆದೆ. ಚಳುವಳಿ ಸ್ವಲ್ಪ ಕಾಲ ಯಶಸ್ಸು ಕಾಣದಿದ್ದ ಸಂದರ್ಭಗಳಲ್ಲಿ ಗಾಂಧೀಜಿ ರಚನಾತ್ಮಕ ಕಾರ್ಯದ ಬಗ್ಗೆ ಮಾತನಾಡುತ್ತಿದ್ದರು; ರಚನಾತ್ಮಕ ಕಾರ್ಯದತ್ತ ಜನರ ಮನಸ್ಸು ಹರಿಯುವಂತೆ ಮಾಡುತ್ತಿದ್ದರು.'

ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಗಾಂಧೀಜಿ ಚಳುವಳಿಯ ದನಿಯನ್ನು, ದಿಕ್ಕನ್ನು ಯಾಕೆ ಬದಲಿಸುತ್ತಿದ್ದರು ಎಂಬುದನ್ನು ಲೋಹಿಯಾ ವಿವರಿಸಿದರು: 'ಯಾವುದೇ ಮನುಷ್ಯನಾಗಲೀ, ಪಕ್ಷವಾಗಲೀ ಕೇವಲ ನಿರಂತರ ಸಂಘರ್ಷದ ಆಹಾರದಿಂದಲೇ ಬದುಕುವುದು ಕಷ್ಟ. ಯಾರೇ ಆಗಲಿ, ಸತತ ಸಂಘರ್ಷದ ದಾರಿಯ ಮೇಲೆ ಜನತೆಯನ್ನು ಮುನ್ನಡೆಸಲಾರರು. ನಡುವೆ ಅರಾಜಕತೆಯ ಕಾಲ ಬಂದೇ ಬರುತ್ತದೆ. ಯಾವ ರಾಜಕೀಯ ಮಾದರಿಯಲ್ಲೂ ಅಥವಾ ರಾಜಕೀಯ ವ್ಯವಸ್ಥೆಯಲ್ಲೂ ಇಂಥ ಅರಾಜಕತೆಯ ಕಾಲದಲ್ಲಿ ಅಬ್ಬರವಿಲ್ಲದ ಚಳುವಳಿಯ ಹೊರತಾಗಿ ಬೇರೆ ದಾರಿ ಇರುವುದಿಲ್ಲ. ಆದರೆ ಗಾಂಧೀಜಿಯವರ ಪಾಲಿಗೆ ರಚನಾತ್ಮಕ ಕಾರ್ಯಕ್ರಮದ ದಾರಿಯಿತ್ತು.'

ಗಾಂಧೀಜಿ ಸ್ಥಾಪಿಸಿದ 'ಅಖಿಲ ಭಾರತೀಯ ಚರಕಾ ಸಂಘ', 'ಅಖಿಲ ಭಾರತ ಗ್ರಾಮೋದ್ಯೋಗ ಸಂಘ' ಮುಂತಾದ ರಚನಾತ್ಮಕ ಕಾರ್ಯಕ್ರಮಗಳನ್ನು ಕೆಲವು ವೈಚಾರಿಕರು ಇಷ್ಟಪಡುತ್ತಿರಲಿಲ್ಲ. ಲೋಹಿಯಾ ಕೂಡ ಈ ಕುರಿತು ಟೀಕೆ ಮಾಡುತ್ತಾ, ಕೊಂಚ ಉಢಾಯಿಸಿ, ಇದೊಂದು 'ಮುದುಕಿಯರ ಕಾರ್ಯಕ್ರಮ' ಎಂದು ಬರೆದುಬಿಟ್ಟಿದ್ದರು! ಆ ಪದ ಕಂಡು ಗಾಂಧೀಜಿ ಕೋಪಗೊಂಡಿದ್ದರೆಂದು ಕಾಣುತ್ತದೆ. ಆ ಬಗ್ಗೆ ಲೋಹಿಯಾ ಮುಂದೆ ವಿವರಣೆ ಕೊಟ್ಟರು: 'ನಾನು ಇಂಥ ಮಾತನ್ನು ವಾಚ್ಯವಾಗಿ ಬಳಸುವಷ್ಟು ಮೂರ್ಖನಾಗಿರಲಿಲ್ಲ! ಕಾರಣ, ಎಲ್ಲ ಚಟುವಟಿಕೆಗಳಿಗೂ ಗಂಡು–ಹೆಣ್ಣು ಇಬ್ಬರೂ ಅಗತ್ಯ ಎಂದು ತಿಳಿದವನು ನಾನು; ಆದರೆ ಅವತ್ತು ನಾನು ಅಂಥ ಕಟುವಾದ ಮಾತನ್ನು ಬಳಸಿ ಹೇಳಿದ್ದು ಅವೆಲ್ಲ ಮುದುಕ, ಮುದುಕಿಯರ ಚಟುವಟಿಕೆಗಳು ಎಂಬ ಅರ್ಥದಲ್ಲಿ.'

ಸ್ವಾತಂತ್ರ್ಯ ಚಳುವಳಿಯ ಜೊತೆಗೆ ರಚನಾತ್ಮಕ